**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. 355/2019**

| | | |
|---|---|---|
| ಸಾಕ್ಷಿಯ ಹೆಸರುಃ | ಬಿ ಎಂ ಲಿಂಗರಾಜು | ಫ್ರಾಸಾಃಃ 1 |
| ತಂದೆ ಹೆಸರುಃ | ಲೇಟ್ ಮಂಚಯ್ಯ | ಚಾಸಾಃಃ 1 |
| ವಯಸ್ಸುಃ | 51 ವರ್ಷ | ಪ್ರಮಾಣೀಕರಿಸಿದ<br>ದಿಃ 13/06/2023 |
| ಉದ್ಯೋಗಃ | ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ದಕ್ಷಿಣ ಕನ್ನಡ , ಮಂಗಳೂರು | |
| ವಾಸಸ್ಥಳಃ | ಮಂಗಳೂರು. | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ **ರಿಂದಃ**

ನಾನು ದಿಃ22/10/2013 ರಿಂದ 12/08/2015 ರವರೆಗೆ ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮೈಸೂರು ಜಿಲ್ಲೆಯಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 12/09/2014 ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು, ಪಿರಿಯಾಪಟ್ಟಣ ಕಂದಾಯ ಅಧಿಕಾರಿಗಳು, ಬೆಟ್ಟದಪುಟ ಪೊಲೀಸ್ ಠಾಣೆ ಸಿಬ್ಬಂದಿ ಆಗ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯರಾದ ನಾವುಗಳು ಪಿರಿಯಾಪಟ್ಟಣ ತಾಲ್ಲೂಕೂ, ಹಾರನಹಳ್ಳಿ ಹೋಬಳಿ ಚನ್ನಕಲ್ಲುಕಾವಲು, ಸರ್ಕಾರಿ ಗೋಮಾಳ ಸರ್ವೆ ನಂಬರ್ 30 ಕ್ಕೆ ಹೋಗಿ ಬೇಟಿ ಮಾಡಿ, ಜಂಟಿ ಪರಿಶೀಲನೆ ಕಾರ್ಯ ಕೈಗೊಂಡೆವು. ಚಾಸಾ–2 ರಿಂದ ಚಾಸಾ–7, ಚಾಸಾ–9 ರವರು ಸ್ಥಳಕ್ಕೆ ಬೇಟಿ ನೀಡಿ ಸ್ಥಳದಲ್ಲಿ ಅನಧೀಕೃತವಾಗಿ ಕಲ್ಲು ಪುಡಿ ಮಾಡುವ ಕ್ರಷರ್ ಘಟಕ ಅಳವಡಿಸಿರುವುದು

ಕಂಡುಬಂದಿತು. ಪಕ್ಕದಲ್ಲೇ ಗಣಿಗಾರಿಕೆ ಮಾಡಿ ಕಲ್ಲುಗಳನ್ನು ತೆಗೆದುಕೊಂಡಿರುವುದು ಕಂಡುಬಂದಿತು. ಸರ್ಕಾರಿ ಸರ್ವೆ ನಂಬರ್ 30 ರ ಉತ್ತರ ಭಾಗದಲ್ಲಿ ಕ್ರಷರ್ ಅಕ್ರಮವಾಗಿ ಘಟಕ ಅಳವಡಿಸಿದ್ದು, ಅಂದಾಜು ಮುಕ್ಕಾಲು ಎಕರೆ ಜಮೀನು ಇರುವುದಾಗಿ ಅಂದಾಜಿಸಲಾಯಿತು. ದಕ್ಷಿಣ ಭಾಗದಲ್ಲಿ ಅಂದಾಜು 2 ವರೆ ಎಕರೆ ಜಮೀನಿನಲ್ಲಿ ಅನಧಿಕೃತ ಕಲ್ಲು ಗಣಿಗಾರಿಕೆ ಮಾಡಿ ಸಾಗಾಟ ಮಾಡಿರುವುದು ಕಂಡು ಬಂತು. ಆ ದಿನ ಸ್ಥಳದಲ್ಲಿ ಅಕ್ರಮವಾಗಿ ಕ್ರಷರ್ ಘಟಕವನ್ನು ಅಳವಡಿಸಿರುವುದನ್ನು ಮಹಜರ್ ಕ್ರಮ ಜರುಗಿಸಿದೆವು. ಕ್ರಷರ್ ಘಟಕವನ್ನು ಕಬ್ಬಿಣದ ಹ್ಯಾಂಗಲ್ ಮತ್ತು ಸಿಮೆಂಟ್ ಬಳಸಿ ಕಟ್ಟಿರುವುದಾಗಿ ಕಂಡುಬಂತು. ಅಕ್ರಮ ಕ್ರಷರ್ ಘಟಕದಲ್ಲಿ ಡಿಜಿ ಸೆಟ್, ಪ್ರೈಮರಿ ಕ್ರಷರ್ ಯುನಿಟ್, ಸೆಕೆಂಡರಿ ಕ್ರಷರ್ ಯುನಿಟ್, ಕನ್ವೇಯರ್ಸ್ ಇರುವುದನ್ನು ಮಹಜರ್ ನಲ್ಲಿ ದಾಖಲಿಸಲಾಯಿತು. ಮಹಜರ್ ನ್ನು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಜರುಗಿಸಲಾಯಿತು. ಅನಧೀಕೃತ ಕಟ್ಟಡ ಕಲ್ಲು ಗಣಿಗಾರಿಕೆ 2 ವರೆ ಎಕರೆ ಜಮೀನು ಪ್ರದೇಶದಲ್ಲಿ ಭೂ ಮಟ್ಟದಿಂದ 6 ಮೀಟರ್ ಎತ್ತರಕ್ಕೆ, ಒಂದೂವರೆ ಎಕರೆ ಪ್ರದೇಶದಲ್ಲಿ ಭೂಮಟ್ಟದಿಂದ 2 ವರೆ ಮೀಟರ್ ಆಳಕ್ಕೆ ಕಲ್ಲು ಗಣಿಗಾರಿಕೆ ತೆಗದು ಸಾಗಾಟ ಮಾಡಿರುವುದು ಕಂಡು ಬಂದಿರುತ್ತದೆ. ಅನಧೀಕೃತ ಗಣಿಗಾರಿಗೆ ಮಾಡಿರುವ ಪ್ರದೇಶದ ಅಕ್ಷಾಂಶ ರೇಖಾಂಶ ವನ್ನು ದಾಖಲಿಸಲಾಯಿತು. ಇದು MMRD ಕಾಯಿದೆ 1957 ಕಲಂ 4(1) ಮತ್ತು 4(1)(ಎ) ಉಲ್ಲಂಘನೆಯಾಗಿದ್ದು ಕಲಂ 21(1) ಮತ್ತು 21(1), ರನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2011 ರ ನಿಯಮ 3 ರ ಉಲ್ಲಂಘನೆ ಆಗಿದ್ದು, ನಿಯಮ 16 ರನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಐಪಿಸಿ 378 ಮತ್ತು 379 ರನ್ವಯ ಕಳ್ಳತನ ಆರೋಪ ಮತ್ತು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಇದನ್ನು ಮಹಜರ್ ಕ್ರಮದ ಮುಖಾಂತರ ಜರುಗಿಸಿ ಕಾನೂನು ಕ್ರಮ ಕೈಗೊಳ್ಳಲು, ಮುಂದಿನ ಕ್ರಮ ಜರುಗಿಸಲು ಜಂಟಿಯಾಗಿ ನಿರ್ಣಯಿಸಲಾಯಿತು.

3. ನಂತರ ದಿಃ 13/09/2014 ರಂದು ಬೆಟ್ಟದಪುರ ಪೊಲೀಸ್ ಠಾಣೆಗೆ ಬೇಟಿ ನೀಡಿ ಮೂಲ ಮಹಜರ್ ನೊಂದಿಗೆ ಸರ್ಕಾರದ ಪರವಾಗಿ ದೂರು ದಾಖಲಿಸಿರುತ್ತೇನೆ. ಈ ಸಂಬಂಧ ದಿಃ 16/09/2014 ರಂದು ನಮ್ಮ ಇಲಾಖೆಯ ಭೂ ವಿಜ್ಞಾನಿ ಮತ್ತು ನಾನು ಬೆಟ್ಟದಪುರ ಪೊಲೀಸ್ ಠಾಣೆಯ ಎಎಸ್ ಐ ರುದ್ರಪ್ಪಗೌಡರವರು ಪಂಚರ ಸಮಕ್ಷಮ ಸ್ಥಳ ಕ್ಕೆ ಬೇಟಿ ನೀಡಿ ನಮ್ಮಗಳ ಸಮಕ್ಷಮ ಮಹಜರ್ ನ್ನು ಬೆಳಿಗ್ಗೆ 11.00 ರಿಂದ ಮಧ್ಯಾಹ್ಞ 1.00 ಗಂಟೆಯ ವರೆಗೆ ಜರುಗಿಸಲಾಯಿತು. ಸದರಿ ಸಮಯದಲ್ಲಿ ಕ್ರಷರ್ ಘಟಕ, ಡಿಜಿಸೆಟ್, ಪ್ರೈಮರಿ ಕ್ರಷರ್, ಸೆಕೆಂಡರಿ ಕ್ರಷರ್ ಮತ್ತು ವೈಬ್ರೇಟರ್ ಗಳನ್ನು ಮತ್ತು ಪವರ್ ಹೌಸ್ ಇರುವುದನ್ನು ಕಲ್ಲು ಪುಡಿ ಮಾಡಿರುವ ಮಾದರಿಗಳನ್ನು ಸಂಗ್ರಹಿಸಲಾಗಿರುತ್ತದೆ. ಮತ್ತು ಅನಧೀಕೃತ ಕಲ್ಲು ಗಣಿಗಾರಿಕೆ ನಡೆದಿರುವ ಪ್ರದೇಶವನ್ನು ದಾಖಲಿಸಲಾಗಿರುತ್ತದೆ. ಚಕ್ಕುಬಂದಿ ಪ್ರಕಾರ ಪೂರ್ವದಲ್ಲಿ ರಾಜ ಬಿನ್ ಲೋಕನಾಥರವರ ಜಮೀನು, ಪಶ್ಚಿಮಕ್ಕೆ ಮೂರ್ತಿ ಯವರ ಜೋಳದ ಫಸಲು ಇರುವ ಜಮೀನು, ಉತ್ತರಕ್ಕೆ ಜಯಪಾಲ್ ರವರ ಜಮೀನು, ದಕ್ಷಿಣಕ್ಕೆ ಮುತ್ತು ರವರಿಗೆ ಸೇರಿದ ಜೋಳದ ಫಸಲಿನ ಜಮೀನು ಚಕ್ಕುಬಂದಿಯನ್ನು ದಾಖಲಿಸಿ, ಬೆಟ್ಟದಪುರ ಗ್ರಾಮದ ಅಭಿಮಾನ್ ಸ್ಟುಡೀಯೋ ದವರಿಂದ ಸ್ಥಳದ ಭಾವಚಿತ್ರ ಮತ್ತು ವಿಡೀಯೋ ಪ್ರತಿಯನ್ನು ತೆಗೆಸಲಾಯಿತು. ಕ್ರಷರ್ ಘಟಕವನ್ನು ಕಬ್ಬಿಣದ ಹ್ಯಾಂಗಲ್ ಮತ್ತು ಸಿಮೆಂಟ್ ನಿಂದ ಅಳವಡಿಸಲಾಗಿದ್ದರಿಂದ ಅಮಾನತ್ತು ಪಡಿಸಿಕೊಳ್ಳಲು ಸಾಧ್ಯವಾಗದ ಕಾರಣ ಎಲ್ಲಿದೆಯೋ ಹಾಗೆಯೇ ಬಿಡಲಾಯಿತು.

4. ದಿಃ 19/09/2014 ರಂದು ದಾಖಲಿಸಿದ ದೂರಿನಲ್ಲಿ ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳಸೋಗೆ ಗ್ರಾಮದ ಸರ್ವೆ ನಂಬರ್ 57/3 ರಲ್ಲಿ ಅನಧೀಕೃತವಾಗಿ ಕ್ರಷರ್ ಘಟಕದಿಂದ ಕಟ್ಟಡ ಕಲ್ಲನ್ನು ದಾಸ್ತಾನು ಮಾಡಲಾಗಿದೆ, ಸದರಿ ದಾಸ್ತಾನು ಕುರಿತು ಕುಶಾಲನಗರ ಗ್ರಾಮದ ರಾಜಸ್ವ ನಿರೀಕ್ಷಕರು, ಅನಧೀಕೃತ ದಾಸ್ತಾನನ್ನು ಪೊಲೀಸ್ ಠಾಣೆಗೆ ನೀಡಿರುತ್ತಾರೆಂದು ದೂರಿನಲ್ಲಿ ನಮೂದು ಮಾಡಿರುತ್ತೇನೆ. ಅಂದಾಜು 3500 ಮೆಟ್ರಿಕ್ ಟನ್ ಗಳಷ್ಟು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 07/10/2014 ರಂದು ಬೆಟ್ಟದಪುರ ಪೊಲೀಸರಿಗೆ ವರದಿ ನೀಡಿದ್ದು

ಅದರಲ್ಲಿ ಆ ಪ್ರದೇಶದಲ್ಲಿ ಗಣಿಗಾರಿಕೆ ಮತ್ತು ಕ್ರಷರ್ ಘಟಕ ಅಳವಡಿಸಲು ಅನುಮತಿ ನೀಡಿರುವುದಿಲ್ಲ ಎಂದು ತಿಳಿಸಿರುತ್ತೇನೆ. ಆ ವರದಿಯಲ್ಲಿ ಅನಧೀಕೃತವಾಗಿ ತೆಗೆದಿರುವ ಖನಿಜ ಅಂದಾಜು 88834 ಮೆಟ್ರಿಕ್ ಟನ್ ಇದನ್ನು ನಮ್ಮ ಕಚೇರಿಯ ತಾಂತ್ರಿಕ ಅಧಿಕಾರಿಗಳಾದ ಚಾಸಾ-6 ಮತ್ತು 7 ರವರು ಅಂದಾಜಿಸಿ ಕಚೇರಿಗೆ ವರದಿಯನ್ನು ನೀಡಿರುತ್ತಾರೆ. ಅಂದಿನ ಮಾರುಕಟ್ಟೆ ಬೆಲೆ ಪ್ರತಿ ಮೆಟ್ರಿಕ್ ಟನ್ ಗೆ ಅಂದಾಜು 150/- ರೂಪಾಯಿ ಮೌಲ್ಯ ಎಂದು ಅಂದಾಜಿಸಿ ಒಟ್ಟು ಸರ್ಕಾರಕ್ಕೆ 1,33,25,100/- ರೂಪಾಯಿಗಳು ಅಕ್ರಮವಾಗಿ ತೆಗೆದ ಖನಿಜದ ಮೌಲ್ಯ ಎಂದು ಅಂದಾಜಿಸಲಾಯಿತು. ಸದರಿ ಅಂದಾಜಿಸಲಾದ ವರದಿಯನ್ನು ಬೆಟ್ಟದಪುರ ಪೊಲೀಸರಿಗೆ ನೀಡಲಾಯಿತು.

5. ದಿಃ 12/09/2014 ಮತ್ತು ದಿಃ16/09/2014 ರ ಮಹಜರ್ ಕಾಲಕ್ಕೆ ಹಾಜರಿದ್ದು ಅವುಗಳಿಗೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ತೆಗೆದ ಛಾಯಚಿತ್ರಗಳ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಮಹಜರ್ ಕಾಲಕ್ಕೆ ಕ್ರಷರ್ ಘಟಕದಲ್ಲಿದ್ದ ಕಲ್ಲು ಮತ್ತು ಜಲ್ಲಿ ಕಲ್ಲಿನ ಪುಡಿಗಳನ್ನು ಸ್ಯಾಂಪಲ್‌ಗಾಗಿ ಒಂದು ಚೀಲದಲ್ಲಿ ತೆಗೆದುಕೊಂಡು ಸೀಲು ಮಾಡಿ ಠಾಣೆಗೆ ತೆಗೆದುಕೊಂಡು ಹೋಗಲಾಯಿತು. ಆ ದಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಜಂಟಿ ಕಾರ್ಯಚರಣೆಯಲ್ಲಿ ಹಾಜರಿದ್ದ ಚಾಸಾ-6 ರಿಂದ 8 ರವರು ಹಾಜರಿದ್ದರು ಎಂದು ದೃಢೀಕರಣ ಪತ್ರವನ್ನು ಠಾಣೆಗೆ ನೀಡಿರುತ್ತೇನೆ.

6. ನಾನು ವಿ.ಟಿ.ದಿನೇಶ್ ಕುಮಾರ್, ಕುಶಾಲನಗರ ವಾಸಿ, ಕಂಟ್ರಾಕ್ಟರ್ ಇವರು ಅನಧೀಕೃತ ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆ ಮಾಡಿರುತ್ತಾರೆಂದು ಮತ್ತು ಅನಧೀಕೃತವಾಗಿ ಕ್ರಷರ್ ಘಟಕ ಅಳವಡಿಸಿರುತ್ತಾರೆಂದು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ.

7. ದಿಃ13/09/2014 ರಂದು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಘಟನೆಯ ಸಂಬಂಧ ದೂರನ್ನು ದಾಖಲಿಸಿರುತ್ತೇನೆ. ನಾನು ಕೊಟ್ಟ ದೂರನ್ನು ಈ ದಿನ ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು **ನಿಪಿ.1** ಎಂದು, ದೂರಿನಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ದಿಃ12/09/2014 ರ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ.2** ಎಂದು, ಸಾಕ್ಷಿಯ

ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ದಿಃ16/09/2014ರ ಸ್ಥಳ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ.3** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ದಿಃ16/09/2014ರ ಪೋಟೋ ಮತ್ತು ಸಿ.ಡಿ, ಅಮಾನತ್ತು ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ.4** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.4(ಎ)** ಎಂದು ಗುರುತಿಸಲಾಯಿತು. 4 ಪೋಟೋಗಳನ್ನು **ನಿಪಿ.5 ರಿಂದ 8** ಎಂದು ಗುರುತಿಸಲಾಯಿತು. ನನಗೆ ಬೆಟ್ಟದಪುರ ಪೊಲೀಸ್ ಠಾಣೆಯಿಂದ ಗಣಿಗಾರಿಕೆ ಬಗ್ಗೆ ಮಾಹಿತಿ ಕೇಳಿದ್ದು ಅದರ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು **ನಿಪಿ.9** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.9(ಎ)** ಎಂದು ಗುರುತಿಸಲಾಯಿತು. ದಿಃ12/09/2014ರಂದು ಚಾಸಾ-6 ರಿಂದ 8ರವರು ಜಂಟಿ ಕಾರ್ಯಾಚರಣೆಯಲ್ಲಿ ನನ್ನೊಂದಿಗೆ ಭಾಗಿಯಾಗಿದ್ದರು ಎಂದು ದೃಢೀಕರಣವನ್ನು ಪೊಲೀಸರಿಗೆ ನೀಡಿರುತ್ತೇನೆ. ಅದನ್ನು **ನಿಪಿ.10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.10(ಎ)** ಗುರುತಿಸಲಾಯಿತು. ಚಾಸಾ-6 ಮತ್ತು 7ರವರು ನೀಡಿರುವ ಅನಧೀಕೃತ ಗಣಿಗಾರಿಕೆ ಮತ್ತು ಸಾಗಾಣಿಕೆಯ ಅಂದಾಜು ಲೆಕ್ಕದ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ.11** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.11(ಎ)** ಎಂದು ಗುರುತಿಸಲಾಯಿತು. ಅಂದಿನ ಹಿರಿಯ ಭೂ ವಿಜ್ಞಾನಿಯವರು ದಿಃ18/19-12-2012ರಂದು ಹಿಂಬರಹವನ್ನು ನಾನು ದೃಢೀಕರಿಸಿರುತ್ತೇನೆ. **ನಿಪಿ.12** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.12(ಎ)** ಎಂದು ಗುರುತಿಸಲಾಯಿತು. ಚಾಸಾ-6 ಮತ್ತು 7 ರವರು ನೀಡಿರುವ ಸ್ಕೆಚನ್ನು ನಾನು ದೃಢೀಕರಿಸಿರುತ್ತೇನೆ, ಅದನ್ನು **ನಿಪಿ.13** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.13(ಎ)** ಎಂದು ಗುರುತಿಸಲಾಯಿತು. ಅಕ್ರಮ ಗಣಿಗಾರಿಕೆ ಮಾಡುತ್ತಿದ್ದ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಅತ ಇಂದು ನ್ಯಾಯಾಲಯದಲ್ಲಿ ಹಾಜರಿದ್ದಾರೆ.

**ಪಾಟೀ ಸವಾಲುಃ** ಆರೋಪಿತರ **ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.